ಬೆಂಗಳೂರು ಮಹಾಧರ್ಮಕ್ಷೇತ್ರ

# ಸುತ್ತೋಲೆ



ಮಹಾಧರ್ಮಾಧ್ಯಕ್ಷರ ನಿಲಯ, 75, ಮಿಲ್ಲರ್ಸ್ ರಸ್ತೆ, ಬೆನ್ಸನ್ ಟೌನ್ ಅಂಚೆ
ಬೆಂಗಳೂರು – 560 046, ಕರ್ನಾಟಕ, ಭಾರತ, ದೂರವಾಣಿ: 23330438, ಫ್ಯಾಕ್ಸ್: 080–23531600
ಇ–ಮೇಲ್: archbishop@bangalorearchdiocese.com, ವೆಬ್‌ಸೈಟ್: www. bangalorearchdiocese.com

**No. 4** **ಸೆಪ್ಟೆಂಬರ್ 2018**


ಒಲವಿನ ಗುರುಗಳೇ, ಧಾರ್ಮಿಕ ಸಹೋದರ–ಸಹೋದರಿಯರೇ ಮತ್ತು ದೈವಪ್ರಜೆಗಳೇ,

## 1. ಕೊಡಗು ಮತ್ತು ಕೇರಳದ ನೆರೆ ಸಂತ್ರಸ್ತರಿಗಾಗಿ ಪರಿಹಾರ

ದುರಂತಗಳು ಮತ್ತು ನೈಸರ್ಗಿಕ ವಿಪತ್ತುಗಳು ನಮ್ಮ ಬದುಕಿನ ಭಾಗವಾಗಿದ್ದರೂ, ಅಂತಹ ವಿಪತ್ತುಗಳಿಂದ ಬಾಧಿಸಲ್ಪಟ್ಟವರಿಗೆ ನಮ್ಮ ತೀವ್ರ ವ್ಯಥೆಯನ್ನು ವ್ಯಕ್ತಪಡಿಸೋಣ. ಕೊಡಗು ಮತ್ತು ಕೇರಳದಲ್ಲಿ ಹಿಂದೆಂದೂ ಕಂಡಿಲ್ಲದ ಮಳೆ ಮತ್ತು ಪ್ರವಾಹವು ನಮ್ಮೆಲ್ಲರನ್ನು ಬೆಚ್ಚಿ ಬೀಳುವಂತೆ ಮಾಡಿತ್ತು. ಇಂತಹ ನೈಸರ್ಗಿಕ ವಿಪತ್ತುಗಳನ್ನು ದೇವರು ಏತಕ್ಕೆ ಆಗಲು ಬಿಡುತ್ತಾರೆ ಎಂದು ನಮ್ಮಲ್ಲಿ ಕೆಲವರು ಪ್ರಶ್ನಿಸಬಹುದು. ಬೈಬಲ್ ಶ್ರೀ ಗ್ರಂಥದಲ್ಲಿ, ದೇವರು, ನೋಹ ಮತ್ತು ಮೋಶೆಯನ್ನು ಅಂತಹ ಪರಿಸ್ಥಿತಿಯಿಂದ ಹೊರ ತಂದರೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ನಮ್ಮ ಸೈನಿಕರ ಮತ್ತು ನೌಕಾ ಪೈಲೆಟ್‌ಗಳ ಅತಿಮಾನುಷ ಪ್ರಯತ್ನ ಹಾಗು ಬಡ ಬೆಸ್ತರ ದೋಣಿಗಳ ಸಹಾಯದಿಂದ ರಕ್ಷಣಾ ಕಾರ್ಯಾಚರಣೆಗೆ ಅನುಕೂಲವಾಯಿತು. ಇದರಿಂದ ಭಾರತೀಯರ ಅಧಮ್ಯ ಚೇತನದ ಸೇವೆಯು ಚರಿತ್ರೆಯ ಪುಟಗಳಲ್ಲಿ ಚಿರಾಯುವಾಗಿ ಉಳಿದುಬಿಡುತ್ತದೆ.

"ನೀವು ನಮ್ಮೊಡನೆ ಇದ್ದಾಗ, ನಮಗಾವುದೂ ಭಯವಿಲ್ಲ" ಎಂಬ ಪದಗಳು ಮುದ್ರಿತ ಮಾಧ್ಯಮವೊಂದರಲ್ಲಿ ಕಂಡಂತಹ ಘೋಷವಾಕ್ಯ ಮಹಾಧರ್ಮಕ್ಷೇತ್ರವೂ ಇದಕ್ಕೆ ಸ್ಪಂಧಿಸಿದೆ. ಕೆಲವು ದಿನಗಳ ಹಿಂದೆ ಮಹಾಧರ್ಮಾಧ್ಯಕ್ಷರ ನಿಲಯದಲ್ಲಿ ಕರೆದ ತುರ್ತುಸಭೆಗೆ ಲಭಿಸಿದ ಅಗಾದ ಪ್ರತಿಕ್ರಿಯೆಗೆ ಧನ್ಯವಾದಗಳು.

"ಬೆಂಗಳೂರು ಮಹಾಧರ್ಮಕ್ಷೇತ್ರದ ನೆರೆ ಪರಿಹಾರ ಸಮಿತಿ" ಎಂಬ ಕಾರ್ಯಪಡೆಯನ್ನು ರಚಿಸಲಾಗಿದೆ. ಇದರಲ್ಲಿ ಗುರುಗಳು, ಧಾರ್ಮಿಕ ಸಹೋದರ/ಸಹೋದರಿಯರು ಹಾಗು ಬೆಂಗಳೂರಿನ ಸರ್ಕಾರೇತರ ಸಂಸ್ಥೆಗಳು ಮತ್ತಿತರ ಪ್ರತ್ಯೇಕ ವ್ಯಕ್ತಿಗಳನ್ನು ಸೇರ್ಪಡೆ ಮಾಡಲಾಗಿದೆ. ನಮ್ಮ ಮನವಿಗೆ ಸ್ಪಂಧಿಸಿ ದಿನಬಳಕೆಯ ವಸ್ತುಗಳನ್ನು, ಆಹಾರ ಪದಾರ್ಥಗಳನ್ನು ಹಾಗು ವಸ್ತ್ರಗಳನ್ನು ನೀಡಿರುತ್ತಾರೆ. ಈಗಾಗಲೇ ಅವೆಲ್ಲವನ್ನು ಕೊಡಗು ಮತ್ತು ಕೇರಳದ ನೆರೆ ಸಂತ್ರಸ್ತರಿಗೆ ಕಳಹಿಸಿಕೊಡಲಾಗಿದೆ.

ತಕ್ಷಣದ ಪರಿಹಾರದ ಬಳಿಕ ಎದುರಾಗುವುದೇ ಪುನರ್ವಸತಿ ಸೌಕರ್ಯಗಳು. ಈ ಹಿನ್ನಲೆಯಲ್ಲಿ ಸಾವಿರಾರು ಮನೆಗಳು, ಶಾಲೆಗಳು ಮತ್ತು ವಾಸಿಸುವ ಸ್ಥಳಗಳ ದುರಸ್ತಿ ಮತ್ತು ಮರುನಿರ್ಮಾಣ ಕಾರ್ಯ ಆಗಬೇಕಿದೆ. ಇಲ್ಲಿಯೇ ನಮ್ಮ ನೈಜ ನೆರವು ಅವರಿಗೆ ಬೇಕಿರುವುದು. ನಮ್ಮ ಮನವಿಗೆ ಓಗೊಟ್ಟು ಧರ್ಮಕೇಂದ್ರಗಳು ಮತ್ತು ದೇವಾಲಯಗಳು 26ನೇ ಆಗಸ್ಟ್ 2018ರಂದು ಸಂಗ್ರಹಿಸಿದ ಕಾಣಿಕೆಯನ್ನು ಈಗಾಗಲೇ ಕಳುಹಿಸಿಕೊಡುತ್ತಿದ್ದಾರೆ.

ನಮ್ಮ ಶಾಲೆಗಳು, ಕಾಲೇಜುಗಳು ಮತ್ತು ಸಂಬಂಧಪಟ್ಟ ಸಂಸ್ಥೆಗಳೆಲ್ಲಾ (ಮಹಾಧರ್ಮಕ್ಷೇತ್ರ ಮತ್ತು ಧಾರ್ಮಿಕ ಸಂಸ್ಥೆಗಳು) ವಿದ್ಯಾರ್ಥಿಗಳಿಂದ ಮತ್ತು ಸಾರ್ವಜನಿಕರಿಂದ ಉತ್ತಮ ವಸೂಲಿ ಮಾಡಬೇಕಾಗಿ ವಿನಂತಿ. ಏಕೆಂದರೆ ಈ ದುರಂತಗಳು ಜಾತಿ ಬೇಧ ಭಾವವಿಲ್ಲದೆ (ಯಾವುದೇ ಧರ್ಮಕ್ಕೆ ಸೇರಿದವರೆನ್ನದೆ) ಎಲ್ಲರ ಮೇಲೂ ಪರಿಣಾಮ ಬೀರುವುದೆಂದು ಜನರಿಗೆ ಅರ್ಥವಾಗುತ್ತದೆ. ಅಂತೆಯೇ ಸ್ವಾಭಾವಿಕ ಹಾಗು ಸಹಜ ಸಹಾನುಭೂತಿ ಮಕ್ಕಳಿಗೆ ಬಾಧಿಸಲ್ಪಟ್ಟ ಪ್ರದೇಶಗಳ ಮೇಲಿರುವುದರಿಂದ ಹಾಗು ಅಂತಹ ದುರಂತಗಳಲ್ಲಿ ದುರ್ಬಲರಾದ ಮಹಿಳೆಯರು ಮಕ್ಕಳು ದುರದೃಷ್ಟವಶಾತ್ ಪರಿಸ್ಥಿತಿಯ ವಿಕೋಪಕ್ಕೆ ಈಡಾಗುವುದರಿಂದ ಮಕ್ಕಳನ್ನು ಕಾಣಿಕೆ ನೀಡಲು ಮನವಿ ಮಾಡಬೇಕು. ಹಾಗೆಯೇ ನಮ್ಮ ಸಂಸ್ಥೆಗಳು ಸಿಬ್ಬಂದಿಗಳಿಗೂ ಕಡೇಪಕ್ಷ ಒಂದು ದಿನದ ಸಂಬಳವನ್ನು ಅಂತಹ ಉದಾತ್ತ ವಿಷಯಕ್ಕೆ ದೇಣಿಗೆಯಾಗಿ ನೀಡುವಂತೆ ಪ್ರೋತ್ಸಾಹಿಸಬೇಕೆಂಬುದೇ ನನ್ನ ಸಲಹೆಯಾಗಿದೆ.

ನಿಮ್ಮ ಹಣಕಾಸು ಸಹಾಯವನ್ನು ಚೆಕ್ ಮುಖಾಂತರ ಅಥವಾ NEFT ವರ್ಗಾವಣೆಯ ಮೂಲಕ ಮಹಾಧರ್ಮಾಧ್ಯಕ್ಷರ ಕಛೇರಿಗೆ ಸೆಪ್ಟೆಂಬರ್ 15, 2018ರೊಳಗೆ ಕಳುಹಿಸಿ ಕೊಡಬೇಕಾಗಿ ವಿನಂತಿ. ಅದನ್ನು ಕಾರಿಥಾಸ್ ಇಂಡಿಯಾಗೆ ಕಳುಹಿಸಿಕೊಡಲಾಗುವುದು. ಸರ್ಕಾರಿ ಏಜೆನ್ಸಿಗಳ ಜೊತೆಗೆ ಕೈಜೋಡಿಸಿ ಪರಿಹಾರ ಕಾರ್ಯಗಳನ್ನು ಕಾರಿಥಾಸ್ ಇಂಡಿಯಾ ಕಾರ್ಯ ನಿರ್ವಹಿಸುತ್ತಿದೆ. ಕಾರಿತಾಸ್ ಇಂಡಿಯಾ ಬೆಂಗಳೂರು ನಿರ್ವಹಣಾಕಾರರೊಡನೆ, ಈಗಾಗಲೇ ಸಮಾಲೋಚಿಸಿ ಮಹಾಧರ್ಮಕ್ಷೇತ್ರದಿಂದ ಆಗುವ ಸಂಗ್ರಹಣಾ ಕಾಣಿಕೆಯನ್ನು ನಿಗದಿತ ಪರಿಹಾರ ಅಥವಾ ಪುನರ್ವಸತಿ ಕಾರ್ಯಕ್ಕೆ ಕೊಡಗು/ಕೇರಳದಲ್ಲಿ ಮಾತ್ರ ಬಳಸಬೇಕೆಂದು ಕೇಳಿಕೊಳ್ಳಲಾಗಿದೆ.

## 2. ಮಾತೆ ಮರಿಯಮ್ಮನ ಜನನೋತ್ಸವದ ಹಬ್ಬ – 8ನೇ ಸೆಪ್ಟೆಂಬರ್ 2018

ಬೆಂಗಳೂರಿನ ರಸ್ತೆಗಳೆಲ್ಲಾ ಅಂದು ಶಿವಾಜಿನಗರದ ಸಂತ ಮರಿಯ ಬಸಿಲಿಕಾ ಕಡೆಗೆ ಎಡೆಮಾಡಿರುತ್ತವೆ. ಸಾಗರೋಪಾದಿಯ ಜನರು, ಮಹಾಧರ್ಮಕ್ಷೇತ್ರದ ಈ ಪುಣ್ಯಕ್ಷೇತ್ರಕ್ಕೆ ಆಗಮಿಸುತ್ತಾರೆ. ಹೆಚ್ಚಾಗಿ ಕ್ರೈಸ್ತೇತರರು ಬರುವುದನ್ನು ಕಂಡಾಗ ನಂಬಲಾಗದಿದ್ದರೂ, ಅದೊಂದು ನಮಗೆ ಆಶೀರ್ವಾದ. ಈ ಹಿನ್ನಲೆಯಲ್ಲಿ ಜೀವಂತ ರೊಟ್ಟಿಯೆನಿಸಿದ 'ದೇವರ ವಾಕ್ಯವನ್ನು' ಹೇಗೆ ಬರುವಂತಹ ಜನಸಂದಣಿ ಉಣ

ಬಡಿಸುವುದೆಂಬುದು ಸವಾಲಿನ ವಿಷಯವಾಗಿದೆ. ಹಾಗಾಗಿ ಮಹಾಧರ್ಮಕ್ಷೇತ್ರದ ಗುರುಗಳಿಗೆ ಮತ್ತು ಧಾರ್ಮಿಕ ಸಹೋದರ/ಸಹೋದರಿಯರಿಗೆ 'ರೊಟ್ಟಿ ಮತ್ತು ವಾಕ್ಯ'ದ ಪೂರೈಕೆದಾರರಾಗಿರೆಂದು ನಾನು ವಿನಂತಿಸುತ್ತೇನೆ. ಯಾತ್ರಿಕರಿಗೆ ಸೌಕರ್ಯಗಳು ಗರಿಷ್ಠ ಮಟ್ಟದಲ್ಲಿಲ್ಲವೆಂದು ನನಗೆ ಅರ್ಥವಾಗುತ್ತದೆ. ಆದರೂ ನಾವು ಅವರಿಗೆ ನೀಡುವಂತದ್ದು ಹುರುಳಿಲ್ಲದ ಆಧ್ಯಾತ್ಮಿಕತೆ ಅಥವಾ ಭಾವನಾತ್ಮಕ ಪೋಷಣೆಯಷ್ಟೇ ಆಗಿರದೆ, ಮಾತೆ ಮರಿಯಳ ಮೂಲಕ ದೇವರ ಪ್ರೀತಿಯನ್ನು ಅನುಭವಿಸುವ ಸಂದರ್ಭವಾಗಲಿ. ಈ ನಿಟ್ಟಿನಲ್ಲಿ ಯಾಜಕರು ವಿಶೇಷವಾಗಿ ಪಾಪನಿವೇದನಾ ಸಂಸ್ಕಾರ ಆಲಿಸಿ ಭಕ್ತಾದಿಗಳು ದೇವರೊಡನೆ ಸಂಧಾನ ಮಾಡಿಕೊಳ್ಳಲು ಸಹಕರಿಸಬೇಕು.

## 3. ಮಹಾಧರ್ಮಕ್ಷೇತ್ರದ ಕಥೋಲಿಕ ಕುಟುಂಬಗಳ ಜನಗಣತಿ

ಪ್ರತಿಯೊಬ್ಬರೂ ಪರಿಗಣಿಸಲ್ಪಡಬೇಕು, ಗುರುತಿಸಬೇಕು ಮತ್ತು ಪುರಸ್ಕರಿಸಬೇಕು ಎಂದು ಇಚ್ಛಿಸುತ್ತಾರೆ. ಕೆಲವು ಧರ್ಮಕೇಂದ್ರಗಳು ಜನಗಣತಿಯ ಕಾರ್ಯವನ್ನು ಕೈಗೆತ್ತಿಕೊಂಡು ಅವರವರ ಧರ್ಮಕೇಂದ್ರಗಳಲ್ಲಿ ಜನಗಣತಿಯ ಪಟ್ಟಿಯನ್ನು ಮಾಡಲು ಶ್ರಮವಹಿಸುತ್ತಿದ್ದಾರೆ. ಆದರೆ ಇನ್ನೂ ಕೆಲವು ಧರ್ಮಕೇಂದ್ರಗಳಲ್ಲಿ ಇನ್ನೂ ಇದನ್ನು ಮಾಡಲಾಗಲಿಲ್ಲ. ನಮ್ಮ ಜನರು, ಜನಸಂದಣಿಯ ನಡುವೆ ಮುಖರಹಿತ ವ್ಯಕ್ತಿಗಳಂತಿದ್ದಾರೆ. ಹಾಗಾಗಿ ಒಂದು ಒಳ್ಳೆಯ ಜನಗಣತಿಯು ಜನರನ್ನು ಗುರುತಿಸಲು ನೆರವಾಗಬಲ್ಲದು, ಮುಖ್ಯವಾಗಿ ಅವರ ಸ್ಥಿತಿಗತಿ, ಅವಶ್ಯಕತೆಗಳನ್ನು ಕಂಡುಕೊಳ್ಳುವುದರಿಂದ ಅವರ ಪಾಲನಾ ಹಾಗು ಆಧ್ಯಾತ್ಮಿಕ ಸೇವೆಗಳನ್ನು ರೂಪಿಸಬಹುದು. ಕೆಲಸ ಹುಡುಕಿಕೊಂಡು ಅಥವಾ ವಿದ್ಯೆಗಾಗಿ ಬಂದಂತಹ ವಲಸಿಗರ ಸಂಖ್ಯೆಯು ಬೆಂಗಳೂರಿನಲ್ಲಿ ಹೆಚ್ಚಿರುವುದರಿಂದ ಪಾಲನಾ ಸೇವೆಯಲ್ಲಿ ಅಂತವರನ್ನು ಸೇರಿಸಬೇಕಾಗಿದೆ.

ಸಾಮಾನ್ಯ ಜನಗಣತಿ ಪಟ್ಟಿಯನ್ನು ಮಹಾಧರ್ಮಕ್ಷೇತ್ರದಿಂದ ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ಧರ್ಮಕೇಂದ್ರಗಳಿಗೆ ಕಳುಹಿಸಿಕೊಡಲಾಗುವುದು. ಧರ್ಮಕೇಂದ್ರ ಪಾಲನಾ ಪರಿಷತ್ತು, ಶ್ರೀಸಾಮಾನ್ಯರ ಸಮುದಾಯಗಳು, ಅಥವಾ ಕಿರು ಕ್ರೈಸ್ತ ಸಮುದಾಯದ ಸದಸ್ಯರ ಮೂಲಕ ಮಾಹಿತಿಯನ್ನು ಸಂಗ್ರಹಿಸಬೇಕು. ಕುಟುಂಬ ಆಯೋಗದ ಕಾರ್ಯದರ್ಶಿ ಫಾ. ಸನ್ನಿ ರಿಚರ್ಡ್‌ರವರ ನೇತೃತ್ವದಲ್ಲಿ ನವೆಂಬರ್ 2018ರ ಅಂತ್ಯದೊಳಗೆ ಜನಗಣತಿ ಪಟ್ಟಿಯನ್ನು ಮಾಹಿತಿ ತಂಡಕ್ಕೆ ಕಳುಹಿಸಿಕೊಡಬೇಕು. ಹಿಂದೆ ಕೈಗೊಂಡ ವಲಸಿಗರ ಮಾಹಿತಿ ಪಟ್ಟಿಯನ್ನೂ ಕಳುಹಿಸಬಹುದು ಅಥವಾ ಹೊಸ ಮಾಹಿತಿ ಪಟ್ಟಿಯನ್ನು ತುಂಬಿಸಿ ಕಳುಹಿಸಿಕೊಡಿ.

## 4. ಯಾಜಕರ ಆಲೋಚನಾ ಸಭೆಗೆ ಚುನಾವಣೆ

ಮಹಾಧರ್ಮಕ್ಷೇತ್ರದಲ್ಲಿ ಯಾಜಕರ ಆಲೋಚನಾ ಸಭೆಯು ಶಾಸನಬದ್ಧ ಅಂಗವಾಗಿದ್ದು, ಅದರಲ್ಲಿ ಯಾಜಕರುಗಳು, ಪದವಿನಿಮಿತ್ತ ಚುನಾವಣೆಯ ಮೂಲಕ ಅಥವಾ ಆಯ್ಕೆಗೊಂಡ ವಿಭಾಗಗಳಿಂದ ಪ್ರತಿನಿಧಿಸುತ್ತಾರೆ. ಈ ಚುನಾವಣೆಗಳು ಅಂತಹ

ಉನ್ನತ ಅಂಗಕ್ಕೆ, ಮುಂದಿನ 19ನೇ ಸೆಪ್ಟೆಂಬರ್ 2018ರಲ್ಲಿ ನಡೆಯುವ ವಲಯ ಮಟ್ಟದ ಧ್ಯಾನಕೂಟದಲ್ಲಿ ನೆರವೇರುವುದು.

## 5. ಗುರುಗಳಿಗೆ ಮಹಾಧರ್ಮಕ್ಷೇತ್ರದ ಮತ್ತು ವಲಯ ಮಟ್ಟದ ಧ್ಯಾನಕೂಟಗಳು

ಆಗಸ್ಟ್ 13ರಂದು ನಡೆದ ಮಹಾಧರ್ಮಕ್ಷೇತ್ರದ ಗುರುಗಳ ಧ್ಯಾನ ಕೂಟದಲ್ಲಿ ಚರ್ಚಿಸಿದ ಪ್ರಕಾರವೇ ಮಹಾಧರ್ಮಕ್ಷೇತ್ರದ ಗುರುಗಳ ಮತ್ತು ಧಾರ್ಮಿಕ ಯಾಜಕರ ಧ್ಯಾನಕೂಟವು ಪ್ರತಿ ತಿಂಗಳ ಅದೇ ದಿನ ಅಂದರೆ ತಿಂಗಳ 3ನೇ ಬುಧವಾರಗಳಂದು ಇರುವುದು. ಮಹಾಧರ್ಮಕ್ಷೇತ್ರದ ಮಟ್ಟಿಗೆ ಮೂರು ತಿಂಗಳಿಗೊಮ್ಮೆ ಮೂರನೇ ಬುಧವಾರದಂದು ಇರುವುದು. ಯಾಜಕರಾದ ನಮಗೆ ಇಂತಹ ಧ್ಯಾನಕೂಟಗಳಲ್ಲಿ ಭಾಗವಹಿಸುವುದರಿಂದ ಜೀವನ ಅರ್ಥಪೂರ್ಣವೆನಿಸುತ್ತದೆ. ಇದರಿಂದ ಆಧ್ಯಾತ್ಮಿಕ ಮಾರ್ಗದರ್ಶನ ಹಾಗು ನಮ್ಮ ಜನರ ಪಾಲನೆಯಲ್ಲಿ ಯಾಜಕ ಬಾಂಧವ್ಯವೂ ಮೂಡುತ್ತದೆ. ಅಷ್ಟೇ ಅಲ್ಲದೆ ಆಯಾ ಪ್ರದೇಶಗಳ ಸಮಸ್ಯೆಗಳನ್ನು ವಲಯದ ಮಟ್ಟದಲ್ಲಿ ಚರ್ಚಿಸಿ ಪರಸ್ಪರ ಸಹಕಾರ ಮತ್ತು ಮಾರ್ಗದರ್ಶನವನ್ನೂ ಸಹ ಕಂಡುಕೊಳ್ಳಬಹುದು. ವಲಯ ಮಟ್ಟದಲ್ಲಿ ಅಥವಾ ಮಹಾಧರ್ಮಕ್ಷೇತ್ರದ ಮಟ್ಟದಲ್ಲಿ ಜರುಗುವ ಧ್ಯಾನಕೂಟಗಳಿಗೆ ಗುರುಗಳು ಹಾಜರಿರುವಂತೆ ನಾನು ಕೇಳಿಕೊಳ್ಳುತ್ತೇನೆ.

ಈ ಕೆಳಕಂಡ ಧ್ಯಾನಕೂಟಗಳ ದಿನಗಳನ್ನು ಗುರುತಿಟ್ಟುಕೊಳ್ಳಿರೆಂದು ವಿನಂತಿಸುತ್ತೇನೆ:

| | | |
|---|---|---|
| ಸೆಪ್ಟೆಂಬರ್ 2018 | ಬುಧವಾರ – 19.09.2018 | ವಲಯ ಮಟ್ಟದ ಧ್ಯಾನಕೂಟ |
| ಅಕ್ಟೋಬರ್ 2018 | ಬುಧವಾರ – 17.10.2018 | ವಲಯ ಮಟ್ಟದ ಧ್ಯಾನಕೂಟ |
| ನವೆಂಬರ್ 2018 | ಬುಧವಾರ – 21.11.2018 | ಮಹಾಧರ್ಮಕ್ಷೇತ್ರದ ಧ್ಯಾನಕೂಟ |
| ಡಿಸೆಂಬರ್ 2018 | ಬುಧವಾರ – 19.12.2018 | ವಲಯ ಮಟ್ಟದ ಧ್ಯಾನಕೂಟ |
| ಜನವರಿ 2019 | ಬುಧವಾರ – 16.01.2019 | ವಲಯ ಮಟ್ಟದ ಧ್ಯಾನಕೂಟ |
| ಫೆಬ್ರವರಿ 2019 | ಬುಧವಾರ – 20.02.2019 | ಮಹಾಧರ್ಮಕ್ಷೇತ್ರದ ಧ್ಯಾನಕೂಟ |
| ಮಾರ್ಚ್ 2019 | ಬುಧವಾರ – 20.03.2019 | ವಲಯ ಮಟ್ಟದ ಧ್ಯಾನಕೂಟ |

## 6. ವರ್ಗಾವಣೆಗಳು ಮತ್ತು ನೇಮಕಾತಿಗಳು

ವಿವರಗಳಿಗೆ ದಯವಿಟ್ಟು ಪುಟ 10ನ್ನು ನೋಡಿ.

## 7. ಸಂತ ಜರ್ಮೈನ್ ಸಮೂಹ ಸಂಸ್ಥೆಗಳ ಅಮೃತ ಮಹೋತ್ಸವದ ವರ್ಷ

ಈ ಮಹಾನ್ ಸಂಸ್ಥೆಯು ಆರಂಭಗೊಂಡದ್ದು 1944ನೇ ವರ್ಷದಲ್ಲಿ. ಜರ್ಮೈನರ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ವರ್ಷವು ಅಮೃತ ಮಹೋತ್ಸವದಲ್ಲಿರುವುದನ್ನು

ಕಂಡಾಗ ನಮಗೆ ಸಂತಸವೆನಿಸುತ್ತದೆ. ಈ ಸಂಸ್ಥೆಯು ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರನ್ನು ಹಾಗು ಹಾಕಿ ಆಟಗಾರರನ್ನು, ಕ್ರೀಡಾಪಟುಗಳನ್ನು, ಆಡಳಿತಾತ್ಮಕ ಮತ್ತು ವೈದ್ಯಕೀಯ ಸಾಧಕರನ್ನು ಹಾಗು ಸ್ವದೇಶದಲ್ಲಿ ಹಾಗು ವಿದೇಶಗಳಲ್ಲಿ ಇರುವ ವಾಣಿಜ್ಯೋದಮಿಗಳನ್ನು ನೀಡಿದೆಯೆಂಬುದು ಗೊತ್ತಿರುವ ವಿಚಾರ.

ಇತರ ಸಂಸ್ಥೆಗಳಂತೆ ಆರಂಭದಲ್ಲಿ ಈ ಸಂಸ್ಥೆಯು ಸಣ್ಣದಾಗಿಯೇ ಆರಂಭಗೊಂಡಿದ್ದು. ವರ್ಷಗಳು ಕಳೆದಂತೆಲ್ಲಾ, ನನ್ನ ಉತ್ತರಾಧಿಕಾರಿಗಳು ಅದರಲ್ಲೂ ವಿಶೇಷವಾಗಿ ನಿವೃತ್ತ ಮಹಾಧರ್ಮಾಧ್ಯಕ್ಷ ಬರ್ನಾಡ್ ಮೊರಾಸರು ಮತ್ತು ಸಂಸ್ಥೆಯ ಹಿಂದಿನ ಮುಖ್ಯಸ್ಥರು, ಸಿಬ್ಬಂದಿ ವರ್ಗದ ಸಹಕಾರ, ಶ್ರಮ ಮತ್ತು ಪ್ರೋತ್ಸಾಹದ ಪ್ರಯುಕ್ತ ಈ ಸಂಸ್ಥೆಯು ಗಣನೀಯವಾಗಿ ಬೆಳೆದು ನಿಂತಿದೆ. ಮೂರನೇ ತರಗತಿಯಿಂದ ಆರಂಭಿಸಿ, ನಂತರದ ವರ್ಷಗಳಲ್ಲಿ ಮಾತ್ರವೇ ಮೊದಲನೇ ತರಗತಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು.

ಹೀಗೆ 75 ವರ್ಷಗಳ ಸುದೀರ್ಘ ಪಯಣದಲ್ಲಿ ಇತರ ಸಂಸ್ಥೆಗಳನ್ನು ಸೇರಿಸಲಾಯಿತು. ಅವುಗಳು ಯಾವುವೆಂದರೆ ಸಂತ ಜರ್ಮೈನ್ ಪದವಿಪೂರ್ವ ಕಾಲೇಜು (2005); ಸಂತ ಜರ್ಮೈನ್ ನರ್ಸರಿ ಶಾಲೆ – 2012ರಲ್ಲಿ ಆರಂಭಗೊಂಡಾಗ – ಸಹಶಿಕ್ಷಣಕ್ಕೆ ಅನುವು ಮಾಡಿಕೊಡಲಾಯಿತು; ಸಂತ ಜರ್ಮೈನ್ ಕಂಪ್ಯೂಟರ್ ಅಕಾಡೆಮಿ (2017) ಮತ್ತು ಸಂತ ಜರ್ಮೈನ್ ಕೋಚಿಂಗ್ ಸೆಂಟರ್ (2018).

ಸಂತ ಜರ್ಮೈನರ ಏಳು ಸಂಸ್ಥೆಗಳು ಒಂದೇ ಆವರಣದಲ್ಲಿದ್ದು, ಮೂಲಭೂತ ಸೌಕರ್ಯಗಳನ್ನು ಹಾಗು ಬೇಕಾದಂತಹ ಸಿಬ್ಬಂದಿ ವರ್ಗವನ್ನು ಹೊಂದಿದೆ. ಹಾಗಾಗಿ ಸಲಹಾ ಸಮಿತಿಯ ಕೋರಿಕೆಯ ಮೇರೆಗೆ ಈ ಸಂಸ್ಥೆಯನ್ನು ಅಮೃತ ಮಹೋತ್ಸವದ ವರ್ಷದಲ್ಲಿ ಅಕಾಡೆಮಿ ಅಥವಾ ವಿದ್ಯಾಪೀಠ ಎಂದು ಘೋಷಿಸಲು ವಿನಂತಿಸಲಾಗಿದೆ. ಆದ್ದರಿಂದ ಇದನ್ನು ಬರುವ ಸೆಪ್ಟೆಂಬರ್ 1, 2018ರಿಂದ ಸಂತ ಜರ್ಮೈನರ ವಿದ್ಯಾಪೀಠವೆಂದು ಮರು ನಾಮಕರಣ ಮಾಡಲು ನನಗೆ ಸಂತೋಷವೆನಿಸುತ್ತದೆ.

ಇದೇ ಸಂದರ್ಭದಲ್ಲಿ, ಈ ಸಂಸ್ಥೆಯನ್ನು ಇಂತಹ ಉನ್ನತ ಸ್ಥಿತಿಗೆ ತರುವಲ್ಲಿ ಕಾರಣರಾದ ಹಿಂದಿನ ಮತ್ತು ಈಗಿನ ಕಾರ್ಯ ನಿರ್ವಹಣೆ ಮಾಡಿದವರೆಲ್ಲರನ್ನೂ ಅಭಿನಂದಿಸುತ್ತೇನೆ.

## 8. ಸೆಪ್ಟೆಂಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಹುಟ್ಟು ಹಬ್ಬ

ವಿವರಗಳಿಗೆ ದಯವಿಟ್ಟು 13ನ್ನು ನೋಡಿ.

## 9. ಸೆಪ್ಟೆಂಬರ್ ತಿಂಗಳಿನಲ್ಲಿ ಬರುವಂತಹ ಮಹಾಧರ್ಮಕ್ಷೇತ್ರದ ಗುರುಗಳ ಯಾಜಕೀಯ ಆಚರಣೆ

ವಿವರಗಳಿಗೆ ದಯವಿಟ್ಟು 14ನ್ನು ನೋಡಿ.

## 10. ಸಂತಾಪ ಸೂಚನೆ

ರಕ್ಷಕರ ಸಭೆಗೆ ಸೇರಿದ (CSSR) ಫಾ. ಕ್ಲೆಮೆಂಟ್ ಕ್ಯಾಂಪಸ್ ಆಗಸ್ಟ್ 28, 2018 ರಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ನೀತಿಶಾಸ್ತ್ರಜ್ಞರಾಗಿ (Moral Theologian) ಬೆಂಗಳೂರು ಮಹಾಧರ್ಮಕ್ಷೇತ್ರದಲ್ಲಿ ಹಾಗೂ ಇತರೆಡೆಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಶುಭಕಾಮನೆಗಳೊಂದಿಗೆ ದೇವರ ಆಶೀರ್ವಾದಗಳನ್ನು ಕೋರುತ್ತಕ್ರಿಸ್ತನಲ್ಲಿ ನಿಮ್ಮ ವಿಶ್ವಾಸಿ,

ಸಹಿ/–

**✠ ಪೀಟರ್ ಮಚಾದೊ**
ಬೆಂಗಳೂರು ಮಹಾಧರ್ಮಾಧ್ಯಕ್ಷರು